ಕರ್ನಾಟಕ ಜೀವ ವಿಮೆ ಯೋಜನೆ

1199 (1434) ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಸಣ್ಣ ಉಳಿತಾಯ ಮತ್ತು ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕ ಜೀವ ವಿಮೆ ಯೋಜನೆಯಡಿ ನೌಕರದಾರರು ಪ್ರತಿ ತಿಂಗಳು ವಿಮಾಕಂತನ್ನು ಬರಿಸಿದ್ದರೂ ಸಹ ನೌಕರರಿಗೆ ಸರಿಯಾಗಿ ಬಾಂಡುಗಳು ತಲುಪುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

2) ಪ್ರತಿ ವರ್ಷ ಬಾಕಿ ಪತ್ರಿಕೆಗಳನ್ನು ಕಳಿಸಲಾಗುತ್ತಿದೆಯೆ?

3) ಮರಣೋತ್ತರ ಸಂಬಂಧಿಸಿದ ವಾರಸುದಾರರಿಗೆ ಜೀವ ವಿಮೆ ಹಣ ಬಟವಾಡೆ ಮಾಡಬೇಕಾದ ಪ್ರಕರಣಗಳು ಎಷ್ಟು?

4) ತ್ವರಿತವಾಗಿ ಬಟವಾಡೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ.?

ಶ್ರೀ ಬಾಬುರಾವ್ ಚಿಂಚನಸೂರ್ (ಸಣ್ಣ ಉಳಿತಾಯ ಮುಜರಾಯಿ ಹಾಗೂ ವಿಮೆ ರಾಜ್ಯ ಸಚಿವರು)

1) ಬಂದಿದೆ

2) ಇಲ್ಲ

3) 458

4) ಈ ಪ್ರಕರಣಗಳನ್ನು ವಿದ್ಯುತ್ ಮೇರೆಗೆ ಇತ್ಯರ್ಥಪಡಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಅಥಣಿ ತಾಲ್ಲೂಕಿನ ಮಹಾರಾಷ್ಟ್ರ ಗಡಿ ಭಾಗದ ಜನರಿಗೆ ಕುಡಿಯುವ ನೀರಿನ ಹಾಗೂ ನೀರಾವರಿ ಸೌಲಭ್ಯ ಕಟ್ಟಿಸುವುದು.

1200 (1436) ಶ್ರೀ ಶಹಜಹಾನ್ ಇ. ಡೊಂಗಾರಗಾಂವ್ (ಅಥಣಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಅಥವಾ ತಾಲ್ಲೂಕಿನ ಮಹಾರಾಷ್ಟ್ರದ ಗಡಿಭಾಗದ ಜನರು ಕುಡಿಯುವ ನೀರಿನ ಸೌಕರ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಈ ಭಾಗದಲ್ಲಿ ಗ್ರಾಂ ನದಿಯಲ್ಲಿ ನೀರಾವರಿ ಸೌಕರ್ಯ ಕಲ್ಪಿಸಲು ಚೆರ್‌ಡ್ಯಾಂ ನಾಲಾ ಬಂದರು ಹಾಗೂ ಕೆರೆಗಳ ನಿರ್ಮಾಣಕ್ಕಾಗಿ ಹೆಚ್ಚಿನ ಅವಶ್ಯಕತೆ ಹಾಗೂ ಬೇಡಿಕೆ ಇದ್ದು ಇದಕ್ಕೆ ಸಂಬಂಧಿಸಿದಂತೆ 2000-200 1ನೇ ಸಾಲಿನ ಕಾರ್ಯಕ್ರಮಗಳ ಪಟ್ಟಿಯನ್ನು ಯೋಜನೆಗಳಿಗೆ ಮಂಜೂರಾತಿ ಕೊಟ್ಟಿದ್ದರೂ 1:3 ಅಣುಷ್ಠಾನ ನಿಗಧಿಪಡಿಸಿಲ್ಲ ಹಾಗೂ ಬಿಡುಗಡೆ ಮಾಡದಿರಲು ಕಾರಣಗಳೇನು?

ಆ) ಈ ವರ್ಷ ಆಯವ್ಯಯದಲ್ಲಿ ಅವಶ್ಯಕ ಕಾರ್ಯಕ್ರಮಗಳಿಗೆ ಎಷ್ಟು ಅನುದಾನ ನಿಗದಿಪಡಿಸಲಾಗಿದೆ?